<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಸ್.ಬಿ.ಕೆ. ವಕೀಲರಿಂದ</u>

ನನಗೆ ಆರೋಪಿತನ ಪರಿಚಯ ತುಂಬಾ ವರ್ಷಗಳಿಂದ ಇದೆ. ಆತ ನಮ್ಮ ಊರಿನ ನಿವಾಸಿಯಾಗಿರುತ್ತಾನೆ. ನಾನು ವಿದ್ಯಾಭ್ಯಾಸ ಮಾಡಿಲ್ಲ, ನನಗೆ ಓದಲು ಬರೆಯಲು ಬರುವುದಿಲ್ಲ. ನನಗೆ ಸರಕಾರದವರು ಕಾಂಟ್ರ್ಯಾಕ್ಟ್ ಕೆಲಸ ಮಾಡಲು ಪರವಾನಿಗೆ ಪತ್ರ ನೀಡಿರುತ್ತಾರೆ. ನಾನು ಸದರಿ ಪರವಾನಿಗೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಮಲಘಾನ ಗ್ರಾಮದ ಸಿಸಿ ರೋಡ್ ನ ಕಾಂಟ್ರ್ಯಾಕ್ಟ್ ಮನ್ಸೂರ್ ಪಟೇಲ್ ಇವರಿಗೆ ಆಗಿತ್ತು. ನಾನು ಸದರಿ ಮನ್ಸೂರ್ ಪಟೇಲ್ ಅವರಿಗೆ ಕಾಂಟ್ರ್ಯಾಕ್ಟ್ ಆದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರಿದು ನಾನು ಮತ್ತು ಆರೋಪಿತ ಸೇರಿ ಮನ್ಸೂರ್ ಪಟೇಲ್ ಅವರಿಗೆ ಸಿಕ್ಕ ಕಾಂಟ್ರ್ಯಾಕ್ಟ್ ನ ಕೆಲಸವನ್ನು ಮಾಡಿದ್ದೇವೆ ಎಂದು ನುಡಿಯುತ್ತಾರೆ. ಸರಕಾರದ ಕಾಂಟ್ರ್ಯಾಕ್ಟ್ ಯಾರ ಹೆಸರಿನಲ್ಲಿರುತ್ತದೆಯೋ ಅವರ ಹೆಸರಿಗೆ ಸದರಿ ಕಾಂಟ್ರ್ಯಾಕ್ಟ್ ನ ಹಣ ಬಂದು ಜಮಾ ಆಗುತ್ತದೆ ಎಂದರೆ ಸರಿ.

ಮನ್ಸೂರ್ ಪಟೇಲ್ ಮತ್ತು ನಮ್ಮ ನಡುವೆ ಕೆಲಸದ ಕುರಿತು ಯಾವುದೇ ಕರಾರು ಪತ್ರ ಆಗಿಲ್ಲ. ಸಾಕ್ಷಿ ಮುಂದುವರಿದು ನಾನು ಮತ್ತು ಆರೋಪಿತ ಮನ್ಸೂರ್ ಪಟೇಲ್ ಅವರ ಮಾತು ಕೇಳಿ ಕೆಲಸ ಮಾಡಿಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ಆರೋಪಿತ ನನಗೆ 2 ಚಕ್ ಗಳನ್ನು ನೀಡಿದ್ದ. ಈ ಪ್ರಕರಣ ಹೂಡುವ ಸುಮಾರು 6 ತಿಂಗಳ ಮೊದಲು ಆರೋಪಿತ ನನಗೆ ಸದರಿ ಚಕ್ ಗಳನ್ನು ನೀಡಿದ್ದ. ಸದರಿ ಚಕ್ ಗಳು ಭದ್ರತೆಗಾಗಿ ನೀಡಲಾಗಿತ್ತಾ ಎಂದರೆ ಸಾಕ್ಷಿ ನಮ್ಮ ಕೆಲಸದ ಕುರಿತು ಹಣ ನೀಡಲು ಆರೋಪಿತ ನನಗೆ ನೀಡಿದ್ದ ಎಂದು ನುಡಿಯುತ್ತಾರೆ. ಆರೋಪಿತ ನೀಡಿದ ಎರಡೂ ಚಕ್ ಗಳು ಬೌನ್ಸ್ ಆಗಿದ್ದು ನಾನು ಕೇವಲ ಒಂದು ಚಕ್ ನ ಕುರಿತು ಈ ಪ್ರಕರಣವನ್ನು ಸಲ್ಲಿಸಿದ್ದೇನೆ. ನನ್ನ ಮತ್ತು ಆರೋಪಿತನ ನಡುವೆ ಯಾವುದೇ ಕರಾರು ಆಗಿಲ್ಲ. ಸಾಕ್ಷಿ ಮುಂದುವರಿದು ಚಕ್ ಗಳನ್ನು ಮಾತ್ರ ನೀಡಿದ್ದ ಎಂದು ನುಡಿಯುತ್ತಾರೆ. ನನಗೆ ಈಗ ಚಕ್ ನ ನಂಬರ್ ಮತ್ತು ದಿನಾಂಕ ನೆನಪಿಲ್ಲ.

ಸಾಕ್ಷಿಗೆ ಈಗ ನಿಪಿ-1 ಚಕ್ ನ್ನು ತೋರಿಸಲಾಗಿ ಅದರ ಮೇಲೆ ಯಾರು ಬರವಣಿಗೆ ಮಾಡಿದ್ದಾರೆ ಎಂದು ಕೇಳಿದಾಗ ಸಾಕ್ಷಿ ಆರೋಪಿತನೇ ಒಬ್ಬ ವ್ಯಕ್ತಿಯಿಂದ ಬರೆಸಿ ಕೊಟ್ಟಿದ್ದಾರೆಂದು ನುಡಿಯುತ್ತಾರೆ. ನನಗೆ ಈಗ ಸದರಿ ಬರವಣಿಗೆ ಮಾಡಿದ ವ್ಯಕ್ತಿಯ ಹೆಸರು ಗೊತ್ತಿಲ್ಲ. ನನಗೆ ನಿಪಿ-1 ಚಕ್ ನ ಮೇಲೆ

ಇಂಗ್ಲಿಷ್ ನಲ್ಲಿ ಬರೆದಿರುವ ಬರವಣಿಗೆ ಓದಲು ಬರುವುದಿಲ್ಲ. ನನ್ನ ಪ್ರಕಾರ ನಿಪಿ-1 ಚಕ್ ನ ಮೇಲೆ ಯಾವುದೇ ಹೆಚ್ಚುವರಿ ಬರವಣಿಗೆ ಆಗಿಲ್ಲ. ನಿಮ್ಮ ಮತ್ತು ಆರೋಪಿತನ ನಡುವೆ ಯಾವುದೇ ಕರಾರು ಆಗಿಲ್ಲ, ನೀವು ಆರೋಪಿತ ಭದ್ರತೆಗಾಗಿ ನೀಡಿದ ಚಕ್ ನ್ನು ದುರುಪಯೋಗ ಮಾಡಿಕೊಂಡು ಸುಳ್ಳು ದೂರನ್ನು ನೀಡಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಆರೋಪಿತ ಯಾವುದೇ ಹಣ ನೀಡಲು ಬಾದ್ಯಸ್ಥನಲ್ಲ ಎಂದರೆ ಸರಿಯಲ್ಲ. ನೀವು ಆರೋಪಿತನಿಗೆ ಕಾಂಟ್ರ್ಯಾಕ್ಟ್ ಕೆಲಸ ಕೊಡಿಸುತ್ತೇನೆಂದು ಹೇಳಿ ಆರೋಪಿತನಿಂದ ಭದ್ರತೆಗಾಗಿ 2 ಚೆಕ್ ಗಳನ್ನು ಪಡೆದು ಅದನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದೂರನ್ನು ನೀಡಿದ್ದೀರಿ ಎಂದರೆ ಸರಿಯಲ್ಲ. ಆರೋಪಿತ ಯಾವುದೇ ಗುನ್ಹೆ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,
ಚಿತ್ತಾಪೂರ.